ಕರ್ನಾಟಕ ಉಚ್ಚ ನ್ಯಾಯಾಲಯ

ಸನ್ಮಾನ್ಯ ಮುಖ್ಯ ನ್ಯಾಯಮೂರ್ತಿ ಶ್ರೀ ಅಭಯ್ ಎಸ್. ಓಕಾ ಮತ್ತು

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಮಹಮದ್ ನವಾಜ್

ಮಾಸ್ಟರ್ ಮಂಜುನಾಥ್ ವಿರುದ್ಧ ಭಾರತ ಒಕ್ಕೂಟ ಹಾಗೂ ಇತರರು*

* ರಿಟ್ ಅರ್ಜಿಸಂಖ್ಯೆ: 13751/2019 (ಇಡಿಎನ್-ಆರ್ಇಎಸ್) ಪಿಐಎಲ್, ದಿನಾಂಕ 28 ನೇ ಆಗಸ್ಟ್, 2019.

ಆದೇಶ

ಮುಖ್ಯ ನ್ಯಾಯಮೂರ್ತಿ ಶ್ರೀ ಅಭಯ್ ಎಸ್. ಓಕಾ:

ಈ ಅರ್ಜಿಯನ್ನು ಅಂತಿಮ ವಿಲೆಗಾಗಿ ಕೈಗೆತ್ತಿಕೊಳ್ಳುತ್ತೇವೆಂಬುದನ್ನು ಈ ಮೊದಲಿನ ದಿನಾಂಕದಂದು ಪಕ್ಷಕಾರರ ಗಮನಕ್ಕೆ ತಂದಿದ್ದೇವೆ.

2. ಮಾನ್ಯ ಹೆಚ್ಚುವರಿ ಸರ್ಕಾರಿ ವಕೀಲರು ಎರಡರಿಂದ ಎಂಟರವರೆಗಿನ ಎದುರುದಾರರನ್ನು ಪ್ರತಿನಿಧಿಸಿದ್ದು, ಅವರ ಗಮನಕ್ಕೆ ತಂದಿರುತ್ತಾರೆ.ಮೊದಲ ಎದುರುದಾರರ ಪರವಾಗಿ ಹಾಜರಾಗಿರುವ ಹಾಜರಾಗಿರುವ ಮಾನ್ಯ ವಕೀಲರು ಗಮನಕ್ಕೆ ತೆಗೆದುಕೊಂಡಿರುತ್ತಾರೆ.

3. ಅರ್ಜಿದಾರನು ಅರ್ಜಿಯ 3 ನೇ ಕಂಡಿಕೆಯಲ್ಲಿ ವಿವರಿಸಲಾದ ರಾಜ್ಯ ನಡೆಸುತ್ತಿರುವ ಶಾಲೆಯಲ್ಲಿ III ನೇ ತರಗತಿಯ ವಿದ್ಯಾರ್ಥಿಯಾಗಿದ್ದಾನೆ.ಅವನು ತನ್ನ ತಂದೆಯ ಮೂಲಕ ಅರ್ಜಿಯನ್ನು ಸಲ್ಲಿಸಿದ್ದು, ತುಂಬಾ ಪ್ರಮುಖವಾದ ವಿವಾದವನ್ನು ಎತ್ತಿದ್ದಾರೆ.ಉಚಿತ ಮತ್ತು ಕಡ್ಡಾಯ ಶಿಕ್ಷಣ ಹಕ್ಕು ಅಧಿನಿಯಮ, 2009 ರ (ಸಂಕ್ಷಿಪ್ತತೆಗಾಗಿ ಆರ್‌ಟಿಇ ಅಧಿನಿಯಮ) 3 ನೇ ನಿಯಮದ ( 1) ನೇ ಉಪ ನಿಯಮದ ಅಡಿಯಲ್ಲಿ ಯಾವ ಮಕ್ಕಳಿಗೆ ಎರಡು ಜೊತೆ ಶಾಲಾ ಸಮವಸ್ತ್ರವನ್ನು ಪಡೆಯುವುದಕ್ಕೆ ಸಂಬಂಧಿಸಿದೆಯೋ ಅಂಥ ಮಕ್ಕಳ ಹಕ್ಕಿನ ಕುರಿತ ವಿವಾದವಾಗಿದೆ.ಅರ್ಜಿದಾರನ ವಾದದ ಪ್ರಕಾರ, ಸದರಿ ಉಪಬಂಧವು, ರಾಜ್ಯ ಸರ್ಕಾರವು ನಡೆಸುತ್ತಿರುವ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳು ಎರಡು ಜೊತೆ ಶಾಲಾ ಸಮವಸ್ತ್ರಗಳನ್ನು ಪಡೆಯಲು ಹಕ್ಕುಳ್ಳವರಾಗಿರುವರು ಎಂಬುದನ್ನು ಕಡ್ಡಾಯಗೊಳಿಸುತ್ತದೆ.

4. ವಿವಾದವನ್ನು ಮೌಲ್ಯ ನಿರ್ಧರಣೆ ಮಾಡುವ ದೃಷ್ಟಿಯಿಂದ ಕಾನೂನಿನ ಸ್ಥಾನದ ಬಗ್ಗೆ ಸಂಕ್ಷಿಪ್ತ ಉಲ್ಲೇಖವನ್ನು ಮಾಡಬೇಕಾಗುತ್ತದೆ. ನಮ್ಮ ಪರಿಗಣನೆಗೆ ಮಾಸ್ಟರ್ ಮಂಜುನಾಥ್ ವಿರುದ್ಧ ಭಾರತ ಒಕ್ಕೂಟ ಹಾಗೂ ಇತರರು ಮುಖ್ಯವಾಗಿರುವ ಮೊದಲ ಉಪಬಂಧವೆಂದರೆ, ಭಾರತ ಸಂವಿಧಾನದ 21- ಎ ಅನುಚ್ಛೇದವಾಗಿದ್ದು, ಅದನ್ನು ಭಾರತ ಸಂವಿಧಾನಕ್ಕೆ 8 ನೇ ತಿದ್ದುಪಡಿಯನ್ನು ಮಾಡುವ ಮೂಲಕ ಜಾರಿಗೆ ತರಲಾಗಿದ್ದು, ಅದನ್ನು ಈ ಮುಂದಿನಂತೆ ಓದಲಾಗಿದೆ:

" 21.ಎ ಶಿಕ್ಷಣ ಹಕ್ಕು:

ರಾಜ್ಯವು ಕಾನೂನಿನ ಮೂಲಕ ನಿರ್ಧರಿಸಬಹುದಾದಂಥ ರೀತಿಯಲ್ಲಿ ಆರರಿಂದ ಹದಿನಾಲ್ಕನೇ ವಯಸ್ಸಿನ ಎಲ್ಲಾ ಮಕ್ಕಳಿಗೆ ಉಚಿತ ಹಾಗೂ ಕಡ್ಡಾಯ ಶಿಕ್ಷಣವನ್ನು ಒದಗಿಸತಕ್ಕದ್ದು.

5. ಈ ಮೊದಲು, ಭಾರತ ಸಂವಿಧಾನದ IV ನೇ ಅಧ್ಯಾಯದ ಭಾಗವಾಗಿದ್ದ 45 ನೇ ಅನುಚ್ಛೇದವು ರಾಜ್ಯ ನೀತಿಯ ಈ ಮುಂದಿನ ನಿರ್ದೇಶಕ ತತ್ವಗಳನ್ನು ವಿಧಿಸಿದೆ.ಸದರಿ ಉಪಬಂಧವನ್ನು ಹೀಗೆ ಓದಲಾಗಿದೆ:

"45. ಮಕ್ಕಳಿಗೆ ಉಚಿತ ಹಾಗೂ ಕಡ್ಡಾಯ ಶಿಕ್ಷಣ ಒದಗಿಸುವುದು:

ರಾಜ್ಯವು, ಈ ಸಂವಿಧಾನ ಪ್ರಾರಂಭವಾದಾಗಿನಿಂದ ಹತ್ತು ವರ್ಷಗಳ ಅವಧಿಯೊಳಗೆ, ಎಲ್ಲಾ ಮಕ್ಕಳಿಗೆ ಅವರಿಗೆ ಹದಿನಾಲ್ಕು ವರ್ಷಗಳು ತುಂಬುವವರೆಗೆ ಉಚಿತ ಹಾಗೂ ಕಡ್ಡಾಯ ಶಿಕ್ಷಣವನ್ನು ನೀಡಲು ಪ್ರಯತ್ನಿಸತಕ್ಕದ್ದು.

ಸಂವಿಧಾನದಲ್ಲಿ 21- ಎ ಅನುಚ್ಛೇದವನ್ನು ಸೇರಿಸಿರುವ ಪರಿಣಾಮವಾಗಿ 45 ನೇ ಅನುಚ್ಛೇದವನ್ನು ತಿದ್ದುಪಡಿ ಮಾಡಲಾಗಿದ್ದು, ಈಗ ಇದನ್ನು ಹೀಗೆ ಓದಲಾಗುತ್ತದೆ.

"45. ಆರು ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳಿಗೆ ಬಾಲ್ಯದ ಆರೈಕೆ ಹಾಗೂ ಶಿಕ್ಷಣವನ್ನು ಒದಗಿಸುವುದು.

ರಾಜ್ಯವು, ಆರು ವರ್ಷ ವಯಸ್ಸು ಪೂರ್ಣಗೊಳ್ಳುವವರೆಗೆ ಎಲ್ಲಾ ಮಕ್ಕಳಿಗೆ ಬಾಲ್ಯದ ಆರೈಕೆ ಹಾಗೂ ಶಿಕ್ಷಣವನ್ನು ಒದಗಿಸುವುದು ".

6. ಶಿಕ್ಷಣ ಹಕ್ಕು ಅಧಿನಿಯಮದ ಉದ್ದೇಶಗಳು ಹಾಗೂ ಕಾರಣಗಳಿಂದ ಕಂಡುಬರಬಹುದಾದಂತೆ, ಭಾರತ ಸಂವಿಧಾನದ 21- ಎ ಅನುಚ್ಛೇದದ ಅಡಿಯಲ್ಲಿ ಪ್ರದತ್ತವಾದ ಮೂಲಭೂತ ಹಕ್ಕನ್ನು ಕಾರ್ಯಗತಗೊಳಿಸುವ ಉದ್ದೇಶಕ್ಕಾಗಿ, ಶಿಕ್ಷಣ ಹಕ್ಕು ಅಧಿನಿಯಮವನ್ನು ಅಧಿನಿಯಮನಗೊಳಿಸಲಾಗಿತ್ತು.ಆದುದರಿಂದ 6 ರಿಂದ 14 ವರ್ಷ ವಯೋಗುಂಪಿನ ಎಲ್ಲಾ ಮಕ್ಕಳಿಗೆ ಉಚಿತ ಹಾಗೂ ಕಡ್ಡಾಯ ಶಿಕ್ಷಣವನ್ನು ಉಪಬಂಧಿಸುವ ಶಿಕ್ಷಣ ಹಕ್ಕು ಅಧಿನಿಯಮವನ್ನು ನಾವು ಉಲ್ಲೇಖ ಮಾಡಲೇಬೇಕಾಗುತ್ತದೆ.ಶಿಕ್ಷಣ ಹಕ್ಕು ಅಧಿನಿಯಮದ 3 ಹಾಗೂ 7 ನೇ ಪ್ರಕರಣಗಳು ಪ್ರಮುಖವಾದವುಗಳಾಗಿದ್ದು ಅವುಗಳನ್ನು ಈ ಮುಂದಿನಂತೆ ಓದಲಾಗಿದೆ:

"3. ಮಕ್ಕಳ ಉಚಿತ ಮತ್ತು ಕಡ್ಡಾಯ ಶಿಕ್ಷಣ:

( 1) 2 ನೇ ಪ್ರಕರಣದ (ಡಿ) ಖಂಡ ಅಥವಾ ( ಇ) ಖಂಡದಲ್ಲಿ ಉಲ್ಲೇಖಿಸಲಾದ ಮಕ್ಕಳನ್ನು ಒಳಗೊಂಡಂತೆ, ಆರರಿಂದ ಹದಿನಾಲ್ಕು ವರ್ಷಗಳ ವಯಸ್ಸಿನ ಪ್ರತಿಯೊಂದು ಮಗು, ಅವನ ಅಥವಾ ಅವಳ ಪ್ರಾಥಮಿಕ ಶಿಕ್ಷಣ ಮುಗಿಯುವವರೆಗೆ ನೆರೆಯ ಶಾಲೆಯಲ್ಲಿ ಉಚಿತ ಹಾಗೂ ಕಡ್ಡಾಯ ಶಿಕ್ಷಣ ಹಕ್ಕನ್ನು ಹೊಂದಿರತಕ್ಕದ್ದು.

( 2) ( 1) ನೇ ಉಪ-ಪ್ರಕರಣದ ಉದ್ದೇಶಕ್ಕಾಗಿ, ಪ್ರಾಥಮಿಕ ಶಿಕ್ಷಣವನ್ನು ಮು ೦ ದುವರೆ ಸುವುದರಿ ೦ ದ ಹಾಗೂ ಪೂರ್ಣಗೊಳಿಸುವುದರಿಂದ ಅವನನ್ನು ಅಥವಾ ಅವಳನ್ನು ತಡೆಯಬಹುದಾದ ಯಾವುದೇ ರೀತಿಯ ಶುಲ್ಕಗಳು ಅಥವಾ

ವೆಚ್ಚಗಳು ಅಥವಾ ಖರ್ಚುಗಳನ್ನು ಸಂದಾಯ ಮಾಡಲು ಜವಾಬ್ದಾರರಾಗಿರತಕ್ಕದ್ದಲ್ಲ.

( 3) ವಿಕಲಚೇತನ ವ್ಯಕ್ತಿಗಳ (ಸಮಾನಾವಕಾಶಗಳು, ಹಕ್ಕುಗಳ ರಕ್ಷಣೆ ಹಾಗೂ ಸಂಪೂರ್ಣ ಭಾಗವಹಿಸುವಿಕೆ) ಅಧಿನಿಯಮ, 1995 ಕ್ಕೆ (1996 ರ 1) ಬಾಧಕವಾಗದಂತೆ, 2 ನೇ ಪ್ರಕರಣದ (ಇಇ) ಖಂಡದ ( ಎ) ಉಪ- ಖ ೦ ಡದಲ್ಲಿ ಉಲ್ಲೇಖಿಸಲಾದ ಒಂದು ಮಗುವು ಹಾಗೂ (ಇಇ) ಖಂಡದ (ಬಿ) ಹಾಗೂ (ಸಿ) ಉಪ-ಖಂಡಗಳಲ್ಲಿ ಉಲ್ಲೇಖಿಸಲಾದ ಮಗು ವಿಕಲಚೇತನ ವ್ಯಕ್ತಿಗಳ (ಸಮಾನಾವಕಾಶಗಳು, ಹಕ್ಕುಗಳ ಸಂರಕ್ಷಣೆ ಹಾಗೂ ಸಂಪೂರ್ಣ ಭಾಗವಹಿಸುವುಕೆ) ಅಧಿನಿಯಮ, 1995 ರ V ನೇ ಅಧ್ಯಾಯದ ಉಪಬಂಧಗಳ ಮೇರೆಗೆ ವಿಕಲಚೇತನ ಮಕ್ಕಳು ಹೊಂದಿರಬಹುದಾಗಿರುವ ಉಚಿತ ಹಾಗೂ ಕಡ್ಡಾಯ ಪ್ರಾಥಮಿಕ ಶಿಕ್ಷಣವನ್ನು ಮುಂದುವರಿಸುವ ಅದೇ ಹಕ್ಕುಗಳನ್ನು ಹೊಂದಿರತಕ್ಕದ್ದು.

ಪರಂತೂ, (ಎಚ್) ಖಂಡದಲ್ಲಿ ಉಲ್ಲೇಖಿಸಲಾದ ' ಬಹುವೈಕಲ್ಯತೆ ' ಯಿರುವ ಮಗು ಹಾಗೂ ಸ್ವಲೀನತೆ, (ಆಟಿಸಂ) ಸೆರೆಬುಲ್ ಪಾಲ್ಸಿ, ಮಾನಸಿಕ ಕುಂಠಿತ ಹಾಗೂ ಬಹು ಅಂಗವೈಕಲ್ಯ ವ್ಯಕ್ತಿಗಳ ರಾಷ್ಟ್ರೀಯ ಕಲ್ಯಾಣ ಟ್ರಸ್ಟ್ 1999 ರ (1999 ರ 44) 2 ನೇ ಪ್ರಕರಣದ ( ಓ) ಖಂಡದಲ್ಲಿ ಉಲ್ಲೇಖಿಸಲಾದ " ತೀವ್ರ ವೈಕಲ್ಯತೆ'ಯಿಂದ ಕೂಡ ಮಗುವೂ ಗೃಹ ಆಧಾರಿತ ಶಿಕ್ಷಣದ ಆಯ್ಕೆಗೆ ಹಕ್ಕುಳ್ಳದ್ದಾಗಿರಬಹುದು.

(ಒತ್ತು ನೀಡಲಾಗಿದೆ)

7. ಆರ್ಥಿಕ ಹಾಗೂ ಇತರ ಜವಾಬ್ದಾರಿಗಳನ್ನು ಹಂಚಿಕೊಳ್ಳುವುದು:

( 1) ಈ ಅಧಿನಿಯಮದ ಉಪಬಂಧಗಳನ್ನು ಜಾರಿಗೆ ತರುವುದಕ್ಕಾಗಿ ಹಣಕಾಸನ್ನು ಒದಗಿಸುವುದಕ್ಕಾಗಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳೆರಡೂ ಸಹವರ್ತಿ ಜವಾಬ್ದಾರಿಯನ್ನು ಹೊಂದಿರತಕ್ಕದ್ದು.

( 2) ಕೇಂದ್ರ ಸರ್ಕಾರವು, ಅಧಿನಿಯಮದ ಉಪಬಂಧಗಳನ್ನು ಅನುಷ್ಠಾನಗೊಳಿಸಲು ಬಂಡವಾಳ ಹಾಗೂ ಆವರ್ತನಾ ವೆಚ್ಚದ ಅಂದಾಜನ್ನು ಸಿದ್ಧಪಡಿಸತಕ್ಕದ್ದು.

( 3) ಕೇಂದ್ರ ಸರ್ಕಾರವು ಸರ್ಕಾರವು,, ರಾಜ್ಯ ರಾಜ್ಯ ಸರ್ಕಾರದೊಂದಿಗೆ ಸಮಾಲೋಚಿಸಿ ಕಾಲಕಾಲಕ್ಕೆ ತಾನು ನಿರ್ಧರಿಸಬಹುದಾದಂತೆ ( 2) ನೇ ಉಪ-ಪ್ರಕರಣದಲ್ಲಿ ಉಲ್ಲೇಖಿಸಲಾದಂಥ ವೆಚ್ಚಗಳ ಶೇಕಡಾವಾರನ್ನು ರಾಜಸ್ವ ಸಹಾಯಾನುದಾನಗಳೆಂದು ರಾಜ್ಯ ಸರ್ಕಾರಕ್ಕೆ ಒದಗಿಸತಕ್ಕದ್ದು.

( 4) ರಾಜ್ಯ ಸರ್ಕಾರವು, ಅಧಿನಿಯಮದ ಉಪಬಂಧಗಳನ್ನು ಜಾರಿಗೆ ತರಲು ಹಣಕಾಸಿನ ತನ್ನ ಪಾಲನ್ನು ಒದಗಿಸಲು ಅನುಕೂಲವಾಗುವ ಹಾಗೆ ಕೇಂದ್ರ ಸರ್ಕಾರವು, ಅಂಥ ಯಾವುದೇ ರಾಜ್ಯ ಸರ್ಕಾರಕ್ಕೆ ಒದಗಿಸಬೇಕಾದ ಹೆಚ್ಚುವರಿ ಸಂಪನ್ಮೂಲಗಳ ಅಗತ್ಯವನ್ನು ಪರಿಶೀಲಿಸಲು 280 ನೇ ಅನುಚ್ಛೇದದ ( 3) ನೇ ಖಂಡದ (ಡಿ) ಉಪ-ಖಂಡದ ಮೇರೆಗೆ ಹಣಕಾಸು ಆಯೋಗಕ್ಕೆ ಉಲ್ಲೇಖವನ್ನು ಮಾಡಲು ಅಧ್ಯಕ್ಷರಿಗೆ ಮನವಿಯನ್ನು ಮಾಡಬಹುದು.

( 5) ( 4) ನೇ ಉಪ-ಪ್ರಕರಣದಲ್ಲಿ ಏನೇ ಒಳಗೊಂಡಿದ್ದರೂ, ರಾಜ್ಯ ಸರ್ಕಾರವು, ( 3) ನೇ ಉಪ-ಪ್ರಕರಣದ ಮೇರೆಗೆ ರಾಜ್ಯ ಮಾಸ್ಟರ್ ಮಂಜುನಾಥ್ ವಿರುದ್ಧ ಭಾರತ ಒಕ್ಕೂಟ ಹಾಗೂ ಇತರರು

ಸರ್ಕಾರಕ್ಕೆ ಕೇಂದ್ರ ಸರ್ಕಾರವು ಒದಗಿಸಿದ ಮೊತ್ತಗಳನ್ನು ಮತ್ತು ಅದರ ಇತರ ಸಂಪನ್ಮೂಲಗಳನ್ನು ಪರಿಗಣನೆಗೆ ತೆಗೆದುಕೊಂಡು, ಅಧಿನಿಯಮದ ಉಪಬಂಧಗಳನ್ನು ಜಾರಿಗೊಳಿಸುವುದಕ್ಕೆ ನಿಧಿಗಳನ್ನು ಒದಗಿಸಲು ಜವಾಬ್ದಾರವಾಗಿರತಕ್ಕದ್ದು.

( 6) ಕೇಂದ್ರ ಸರ್ಕಾರವು,

( ಎ) 29 ನೇ ಪ್ರಕರಣದ ಮೇರೆಗೆ ನಿರ್ದಿಷ್ಟಪಡಿಸಲಾದ ಶೈಕ್ಷಣಿಕ ಪ್ರಾಧಿಕಾರದ ಸಹಾಯದೊಂದಿಗೆ ರಾಷ್ಟ್ರೀಯ ಪಠ್ಯಕ್ರಮದ ರೂಪುರೇಷೆಗಳನ್ನು ವಿನ್ಯಾಸಗೊಳಿಸತಕ್ಕದ್ದು;

(ಬಿ) ಶಿಕ್ಷಕರ ತರಬೇತಿಗಾಗಿ ಮಾನದಂಡಗಳನ್ನು ರೂಪಿಸಿ ಜಾರಿಗೊಳಿಸತಕ್ಕದ್ದು;

(ಸಿ) ಹೊಸ ಬದಲಾವಣೆಗಳು, ಸಂಶೋಧನೆಗಳು, ಯೋಜನೆ ರೂಪಿಸುವಿಕೆ ಹಾಗೂ ಸಾಮರ್ಥ್ಯ ನಿರ್ಮಾಣಕ್ಕಾಗಿ ರಾಜ್ಯ ಸರ್ಕಾರಕ್ಕೆ ತಾಂತ್ರಿಕ ಬೆಂಬಲ ಹಾಗೂ ಸಂಪನ್ಮೂಲಗಳನ್ನು ಒದಗಿಸುವುದು ".

ಅನುಚ್ಛೇದ 21- ಎ ಹಾಗೂ ಶಿಕ್ಷಣ ಹಕ್ಕು ಅಧಿನಿಯಮದ 3 ನೇ ಪ್ರಕರಣದ ( 1) ನೇ ಉಪ-ಪ್ರಕರಣವು, 6-14 ವರ್ಷ ವಯೋಗುಂಪಿನ ಪ್ರತಿಯೊಂದು ಮಗುವಿಗೆ ಅವನ ಅಥವಾ ಅವಳ ಪ್ರಾಥಮಿಕ ಶಿಕ್ಷಣವನ್ನು ಪೂರ್ಣಗೊಳಿಸುವವರೆಗೆ ಉಚಿತ ಹಾಗೂ ಕಡ್ಡಾಯ ಶಿಕ್ಷಣ ಪಡೆಯುವ ಹಕ್ಕನ್ನು ನೀಡುತ್ತದೆ.ಶಿಕ್ಷಣ ಹಕ್ಕು ಅಧಿನಿಯಮದ 2 ನೇ ಪ್ರಕರಣದ ಅನುಕ್ರಮವಾಗಿ (ಡಿ) ಹಾಗೂ ( ಇ) ಖಂಡಗಳಲ್ಲಿ ಪರಿಭಾಷಿಸಲಾದಂತೆ ಅನುಕೂಲ ವಂಚಿತ ಸಮುದಾಯಕ್ಕೆ ಅಥವಾ ದುರ್ಬಲ ವರ್ಗಗಳಿಗೆ ಸೇರಿದ ಮಕ್ಕಳು ಸಹ ಅದೇ ಹಕ್ಕುಗಳನ್ನು ಪಡೆಯಲು ಹಕ್ಕುಳ್ಳವರಾಗಿರುವರು.

7. ಶಿಕ್ಷಣ ಹಕ್ಕು ಅಧಿನಿಯಮದ 2 ನೇ ಪ್ರಕರಣದ (ಎಫ್) ಖಂಡವ, ' ಪ್ರಾಥಮಿಕ ಶಿಕ್ಷಣ ' ಎಂದರೆ, I ನೇ ತರಗತಿಯಿಂದ VIII ನೇ ತರಗತಿಯವರೆಗಿನ ಶಿಕ್ಷಣ ಎಂಬುದಾಗಿ ಪರಿಭಾಷಿಸುತ್ತದೆ.ಸದರಿ ಅಧಿನಿಯಮದ 3 ನೇ ಪ್ರಕರಣದ ( 2) ನೇ ಉಪ-ಪ್ರಕರಣವು ತುಂಬಾ ಪ್ರಮುಖವಾದುದಾಗಿದ್ದು, ಅದು " ಯಾವುದೇ ಮಗು, ಪ್ರಾಥಮಿಕ ಶಿಕ್ಷಣವನ್ನು ಮುಂದುವರೆಸುವುದರಿಂದ ಅಥವಾ ಪೂರ್ಣಗೊಳಿಸುವುದರಿಂದ ಅವನಿಗೆ ಅಥವಾ ಅವಳಿಗೆ ಅಡ್ಡಿಯಾಗಬಹುದಾದಂಥ ಯಾವುದೇ ರೀತಿಯ ಶುಲ್ಕ ಅಥವಾ ವೆಚ್ಚ ಅಥವಾ ಖರ್ಚುಗಳನ್ನು ಸಂದಾಯ ಸಂದಾಯ ಚ ಮಾಡಲು ಹೊಣೆಯಾಗಿರತಕ್ಕದ್ದಲ್ಲ " ಎಂಬುದನ್ನು ಉಪಬಂಧಿಸುತ್ತದೆ.

8. ರಾಜ್ಯ ಸರ್ಕಾರವು, ಕರ್ನಾಟಕ ಮಕ್ಕಳ ಉಚಿತ ಹಾಗೂ ಕಡ್ಡಾಯ ಶಿಕ್ಷಣ ನಿಯಮಗಳು, 2012 ನ್ನು (ಸಂಕ್ಷಿಪ್ತತೆಗಾಗಿ ರಾಜ್ಯ ನಿಯಮಗಳು) ರಚಿಸುವ ಮೂಲಕ ಶಿಕ್ಷಣ ಹಕ್ಕು ಅಧಿನಿಯಮದ 38 ನೇ ಪ್ರಕರಣದ ( 1) ನೇ ಉಪ-ಪ್ರಕರಣದ ಮೇರೆಗೆ ನಿಯಮ ರಚಿಸುವ ತನ್ನ ಅಧಿಕಾರವನ್ನು ಚಲಾಯಿಸಿದೆ.ರಾಜ್ಯ ನಿಯಮಗಳ 5 ನೇ ನಿಯಮವು ಪ್ರಮುಖವಾದುದಾಗಿದ್ದು ಅದನ್ನು ಹೀಗೆ ಓದಲಾಗಿದೆ:

"5. 8 ಹಾಗೂ 9 ನೇ ಪ್ರಕರಣದ ಉದ್ದೇಶಕ್ಕಾಗಿ ಅನುಕೂಲವಂಚಿತ ಮಕ್ಕಳ ಸಂಬಂಧದಲ್ಲಿ ಸರ್ಕಾರ ಹಾಗೂ ಸ್ಥಳೀಯ ಪ್ರಾಧಿಕಾರಗಳ ಕರ್ತವ್ಯಗಳು-

( 1) 2 ನೇ ಪ್ರಕರಣದ (ಎನ್) ಖಂಡದ ( 1) ನೇ ಉಪ-ಖಂಡದಲ್ಲಿ ಉಲ್ಲೇಖಿಸಲಾದ ರಾಜ್ಯ ಸರ್ಕಾರ ಅಥವಾ ಸ್ಥಳೀಯ ಪ್ರಾಧಿಕಾರದ ಶಾಲೆಗೆ ಹೋಗುವ ಮಗು, 12 ನೇ ಪ್ರಕರಣದ ( 1) ನೇ ಉಪ-ಪ್ರಕರಣದ (ಬಿ) ಖಂಡಕ್ಕೆ ಅನುಸಾರವಾಗಿ 2 ನೇ ಪ್ರಕರಣದ (ಎನ್) ಖಂಡದ(ii) ನೇ ಉಪ-ಖಂಡದಲ್ಲಿ ಉಲ್ಲೇಖಿಸಲಾದ ಶಾಲೆಗೆ ಹೋಗುವ ಮಗು ಹಾಗೂ 12 ನೇ ಪ್ರಕರಣದ ( 1) ನೇ ಉಪ-ಪ್ರಕರಣದ (ಸಿ) ಖಂಡಕ್ಕೆ ಅನುಸಾರವಾಗಿ 2 ನೇ ಪ್ರಕರಣದ (ಎನ್) ಖಂಡದ(iii) ಹಾಗೂ(iv) ನೇ ಖಂಡದಲ್ಲಿ ಉಲ್ಲೇಖಿಸಲಾದ ಶಾಲೆಗೆ ಹೋಗುವ ಮಗು, ಉಚಿತ ಪಠ್ಯಪುಸ್ತಕಗಳು, ಬರವಣಿಗೆ ಸಾಮಗ್ರಿ ಹಾಗೂ ಸಮವಸ್ತ್ರಕ್ಕೆ ಮಾತ್ರ ಹಕ್ಕುಳ್ಳದ್ದಾಗಿರತಕ್ಕದ್ದು.

ಪರಂತು, ವಿಕಲಚೇತನ ಮಗುವಿಗೂ ಕೂಡ ಉಚಿತ ವಿಶೇಷ ಕಲಿಕಾ ಹಾಗೂ ಪೂರಕ ಸಾಮಗ್ರಿಗಳನ್ನು ಒದಗಿಸತಕ್ಕದ್ದು.

( 2) ನೆರೆ-ಹೊರೆಯ ಶಾಲೆಗಳನ್ನು ನಿರ್ಧರಿಸುವ ಹಾಗೂ ಸ್ಥಾಪಿಸುವ ಉದ್ದೇಶಕ್ಕಾಗಿ, ಸಾರ್ವಜನಿಕ ಶಿಕ್ಷಣ ಆಯುಕ್ತರು ಅಥವಾ ಸ್ಥಳೀಯ ಪ್ರಾಧಿಕಾರವು, ಗೊತ್ತುಪಡಿಸಿದ ದಿನಾಂಕದಿಂದ ಒಂದು ವರ್ಷದೊಳಗೆ ಮತ್ತು ಆ ನಂತರ ಪ್ರತಿವರ್ಷ ಶಾಲೆಯ ನಕಾಸೆ ರೂಪಿಸುವ ಕಾರ್ಯವನ್ನು ಕೈಗೆತ್ತಿಕೊಳ್ಳತಕ್ಕದ್ದು ಹಾಗೂ ದೂರದಲ್ಲಿರುವ ಪ್ರದೇಶಗಳಲ್ಲಿರುವ ಮಕ್ಕಳು, ವಿಕಲಚೇತನ ಮಕ್ಕಳು, ಅನುಕೂಲ ವಂಚಿತ ಸಮುದಾಯಗಳಿಗೆ ಸೇರಿದ ಮಕ್ಕಳು, ದುರ್ಬಲ ವರ್ಗಗಳಿಗೆ ಸೇರಿದ ಮಕ್ಕಳು ಮತ್ತು 4 ನೇ ಪ್ರಕರಣದಲ್ಲಿ ಉಲ್ಲೇಖಿಸಲಾದ ಮಕ್ಕಳು ಇವರನ್ನು ಒಳಗೊಂಡಂತೆ ಎಲ್ಲ ಮಕ್ಕಳನ್ನು ಗುರುತಿಸತಕ್ಕದ್ದು.

( 3) ಡಿ.ಡಿ.ಪಿ.ಐ. ಅಥವಾ ಸ್ಥಳೀಯ ಪ್ರಾಧಿಕಾರವು ತಮ್ಮ ಅಧಿಕಾರ ವ್ಯಾಪ್ತಿಯೊಳಗೆ ಯಾವುದೇ ಮಗು ಶಾಲೆಯಲ್ಲಿ ಜಾತಿ, ವರ್ಗ, ಧರ್ಮ ಅಥವಾ ಲಿಂಗ ತಾರತಮ್ಯವನ್ನು ಈ ಶಾಲೆಯಲ್ಲಿ ಮಾಡುತ್ತಿಲ್ಲವೆಂಬುದನ್ನು ಖಚಿತಪಡಿಸತಕ್ಕದ್ದು.

( 4) 8 ನೇ ಪ್ರಕರಣದ (ಸಿ) ಖಂಡ ಹಾಗೂ 9 ನೇ ಪ್ರಕರಣದ (ಸಿ) ಖಂಡದ ಉದ್ದೇಶಗಳಿಗಾಗಿ, ಸಾರ್ವಜನಿಕ ಶಿಕ್ಷಣ ಆಯುಕ್ತರು ಕರ್ನಾಟಕ ತೀರ್ಪುಗಳ ವರದಿ 2021 ಹಾಗೂ ಸ್ಥಳೀಯ ಪ್ರಾಧಿಕಾರವು ದುರ್ಬಲ ವರ್ಗಕ್ಕೆ ಸೇರಿದ ಮಗು ಹಾಗೂ ಅನುಕೂಲ ವಂಚಿತ ಸಮುದಾಯಕ್ಕೆ ಸೇರಿದ ಮಗುವನ್ನು, ಮಧ್ಯಾಹ್ನದ ಬಿಸಿಯೂಟದ ಅವಧಿಯಲ್ಲಿ, ಆಟದ ಮೈದಾನಗಳಲ್ಲಿ, ಕುಡಿಯುವ ನೀರನ್ನು ಬಳಸುವಲ್ಲಿ ಹಾಗೂ ಶೌಚಾಲಯ ಸೌಲಭ್ಯ ಬಳಕೆಯಲ್ಲಿ ಹಾಗೂ ಶೌಚಾಲಯ ಅಥವಾ ತರಗತಿ ಕೊಠಡಿಗಳ ಸ್ವಚ್ಛಗೊಳಿಸುವಲ್ಲಿ ಯಾವುದೇ ರೀತಿಯಲ್ಲೂ ಪ್ರತ್ಯೇಕಿಸಿಲ್ಲ ಅಥವಾ ತಾರತಮ್ಯವೆಸಗಿಲ್ಲವೆಂಬುದನ್ನು ಸುನಿಶ್ಚಿತಗೊಳಿಸತಕ್ಕದ್ದು.(ಒತ್ತು ನೀಡಲಾಗಿದೆ)

9. ಮಾನವ ಸಂಪನ್ಮೂಲ ಇಲಾಖೆ, ಭಾರತ ಸರ್ಕಾರ ಹಾಗೂ ರಾಜ್ಯ ಸರ್ಕಾರದ ಸಂವಾದಿ ಸಚಿವಾಲಯವು ಪ್ರಚುರಪಡಿಸಿದ ಶಿಕ್ಷಣ ಹಕ್ಕು ಅಧಿನಿಯಮವನ್ನಾಧರಿಸಿ ಸರ್ವ ಶಿಕ್ಷಣ ಅಭಿಯಾನದ ರೂಪುರೇಷೆಯ ದಾಖಲೆಯ ಕಡೆಗೂ ಸಹ ನಮ್ಮ ಗಮನವನ್ನು ಸೆಳೆಯಲಾಗಿದೆ.ಇದು, ಸರ್ವ ಶಿಕ್ಷಣ ಅಭಿಯಾನವು, ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಎಲ್ಲಾ ಮಕ್ಕಳಿಗೆ ಹಾಗೂ ರಾಜ್ಯ ಸರ್ಕಾರಗಳು ರಾಜ್ಯ ಬಜೆಟ್ನಿಂದ ಬಡತನ ರೇಖೆಗಿಂತ ಕೆಳಗಿರುವ ಮಕ್ಕಳಿಗೆ ಸಮವಸ್ತ್ರವನ್ನು ಒದಗಿಸಲು ಸಾಧ್ಯವಿಲ್ಲದಿದ್ದಾಗ ಅಂಥ ಮಕ್ಕಳಿಗೂ ಸಹ ಎರಡು ಜೊತೆ ಸಮವಸ್ತ್ರಗಳನ್ನು ಒದಗಿಸುತ್ತದೆಯೆಂಬುದನ್ನು ಉಪಬಂಧಿಸಿದೆ.

10. ರಾಜ್ಯ ಸರ್ಕಾರವು ಶಿಕ್ಷಣ ಹಕ್ಕು ಅಧಿನಿಯಮದ 3 ನೇ ಪ್ರಕರಣವು ಅನ್ವಯವಾಗುವ ಮಕ್ಕಳಿಗೆ ಹಾಗೂ ರಾಜ್ಯ ಸರ್ಕಾರವು ನಡೆಸುತ್ತಿರುವ ಶಾಲೆಗಳಲ್ಲಿ ಪ್ರಾಥಮಿಕ ಶಿಕ್ಷಣವನ್ನು ಪಡೆದುಕೊಳ್ಳುತ್ತಿರುವ ಮಕ್ಕಳಿಗೆ ಎರಡು ಜೊತೆ ಸಮವಸ್ತ್ರಗಳನ್ನು ಒದಗಿಸಲು ರಾಜ್ಯ ಸರ್ಕಾರವು ಹೊಣೆ ಹೊತ್ತಿದೆಯೇ ಎಂಬುದು ಪ್ರಶ್ನೆಯಾಗಿದೆ.2018-19ನೇ ಸಾಲಿನ ಶೈಕ್ಷಣಿಕ ವರ್ಷದ ಅವಧಿಯಲ್ಲಿ ರಾಜ್ಯ ಸರ್ಕಾರವು ನಡೆಸುತ್ತಿರುವ ಶಾಲೆಗಳಲ್ಲಿ 1 ರಿಂದ VIII ನೇ ತರಗತಿಯವರೆಗೆ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಎರಡನೇ ಜೊತೆ ಉಚಿತ ಸಮವಸ್ತ್ರ ವಿತರಣೆಗೆ ಸಂಬಂಧಪಟ್ಟಂತೆ ಸರ್ಕಾರಿ ಆದೇಶಸಂಖ್ಯೆ: 30 ನೇ ಜೂನ್ 2018 ರಲ್ಲಿ ನಂಬಿಕೆ ಇಡಲಾಗಿದೆ.ಹಿಂದೆ ಹೇಳಲಾದ ಸರ್ಕಾರಿ ಆದೇಶದ ಅಡಿಯಲ್ಲಿ ಅದರಲ್ಲಿ ಸೇರಿಸಲಾದ ನಿಬಂಧನೆಗಳು ಹಾಗೂ ಷರತ್ತುಗಳಿಗೊಳಪಟ್ಟು ಒಕ್ಕೂಟ ಸರ್ಕಾರದ ಸಕ್ರಿಯ ಸಹಕಾರದೊಂದಿಗೆ ಸರ್ಕಾರಿ ಶಾಲೆಗಳಲ್ಲಿ 1 ರಿಂದ VIII ನೇ ತರಗತಿಯವರೆಗೆ ವ್ಯಾಸಂಗ ಮಾಡುತ್ತಿರುವ ಮಕ್ಕಳಿಗೆ ಎರಡನೇ ಜೊತೆ ಸಮವಸ್ತ್ರವನ್ನು ವಿತರಿಸುವ ನಿರ್ದೇಶನವನ್ನು ಜಾರಿಗೊಳಿಸಲು ಸರ್ವ ಶಿಕ್ಷಣ ಅಭಿಯಾನದ ರಾಜ್ಯ ಯೋಜನಾ ನಿರ್ದೇಶಕರಿಗೆ ಅನುಮತಿಯನ್ನು ನೀಡಲಾಗಿತ್ತು.ಹೀಗಾಗಿ ರಾಜ್ಯ ಸರ್ಕಾರವು 2018-19ನೇ ಸಾಲಿನಲ್ಲಿ ಸರ್ಕಾರಿ ಶಾಲೆಗಳಲ್ಲಿ 1

ರಿಂದ VIII ನೇ ತರಗತಿಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಎರಡು ಜೊತೆ ಸಮವಸ್ತ್ರಗಳನ್ನು ಒದಗಿಸುವಂತೆ ನಿರ್ದೇಶನವನ್ನು ನೀಡಿತ್ತು.

11. ಪಕ್ಷಕಾರರ ಪರವಾಗಿ ಹಾಜರಾಗಿರುವ ಮಾನ್ಯ ವಕೀಲರ ವಾದವನ್ನು ಆಲಿಸಿದ ನಂತರ ಹಾಗೂ ರಾಜ್ಯವು ಸಲ್ಲಿಸಿದ ಆಕ್ಷೇಪಣೆಗಳ ಹೇಳಿಕೆಯನ್ನು ಅವಗಾಹಿಸಿದ ನಂತರ, ನಾವು, ಅರ್ಜಿಯಲ್ಲಿ ಎತ್ತಿದ ವಾದಗಳನ್ನು ಒಪ್ಪಿಕೊಳ್ಳಬೇಕಾಗುತ್ತದೆಯೆಂಬ ಅಭಿಪ್ರಾಯಕ್ಕೆ ಬಂದಿರುತ್ತೇವೆ.ಸಂವಿಧಾನದ 21- ಎ ಅನುಚ್ಛೇದವನ್ನು ನಾವು ಈಗಾಗಲೇ ಉದ್ಧರಿಸಿದ್ದೇವೆ.ರಾಜ್ಯವು ಕಾನೂನಿನ ಮೂಲಕ ನಿರ್ಧರಿಸಬಹುದಾದಂಥ ರೀತಿಯಲ್ಲಿ 6 ರಿಂದ 14 ವರ್ಷ ವಯೋಗುಂಪಿನ ಎಲ್ಲಾ ಮಕ್ಕಳಿಗೆ ಉಚಿತ ಹಾಗೂ ಕಡ್ಡಾಯ ಶಿಕ್ಷಣ ನೀಡಲು ರಾಜ್ಯಕ್ಕೆ ಆದೇಶ ನೀಡುತ್ತದೆ.ಶಿಕ್ಷಣ ಹಕ್ಕು ಅಧಿನಿಯಮದ 3 ನೇ ಪ್ರಕರಣದ ( 1) ನೇ ಉಪ-ಪ್ರಕರಣವು ಅನ್ವಯವಾಗುವ ಮಕ್ಕಳು ಉಚಿತ ಹಾಗೂ ಕಡ್ಡಾಯ ಪ್ರಾಥಮಿಕ ಶಿಕ್ಷಣವನ್ನು ಪಡೆಯಲು ಹಕ್ಕುಳ್ಳವರಾಗಿರುವರು.3 ನೇ ಪ್ರಕರಣದ ( 2) ನೇ ಉಪ-ಪ್ರಕರಣವು, ಯಾವುದೇ ಮಗು, ಪ್ರಾಥಮಿಕ ಶಿಕ್ಷಣವನ್ನು ಮುಂದುವರಿಸುವುದರಿಂದ ಅಥವಾ ಪೂರ್ಣಗೊಳಿಸುವುದರಿಂದ ಅವನಿಗೆ ಅಥವಾ ಅವಳಿಗೆ ಅಡ್ಡಿಯಾಗಬಹುದಾದಂತಹ ಯಾವುದೇ ಮೊತ್ತ ಅಥವಾ ಶುಲ್ಕ ಅಥವಾ ವೆಚ್ಚ ಅಥವಾ ಖರ್ಚುಗಳನ್ನು ಸಂದಾಯ ಮಾಡಲು ಹೊಣೆಯಾಗಿರತಕ್ಕದ್ದಲ್ಲ ಚ ಎಂಬ ಬಗ್ಗೆ ಯಾವುದೇ ಅನಿಶ್ಚಿತ ನಿಬಂಧನೆಗಳನ್ನು ವಿಧಿಸಿಲ್ಲವೆಂಬುದು ಹೆಚ್ಚು ೧ ಚ ನಿರ್ದಿಷ್ಟವಾಗಿದೆ.ಹೀಗಾಗಿ, ಸಮವಸ್ತ್ರವನ್ನು ಧರಿಸುವುದು ಕಡ್ಡಾಯವಾಗಿದ್ದರೆ, ಸಮವಸ್ತ್ರಗಳ ಮೇಲೆ ಯಾವುದೇ ವೆಚ್ಚವನ್ನು ಭರಿಸುವಂತೆ ಯಾವುದೇ ವಿದ್ಯಾರ್ಥಿಯನ್ನು ಬಲವಂತಪಡಿಸುವಂತಿಲ್ಲ.

12. ರಾಜ್ಯ ಸರ್ಕಾರ ನಡೆಸುತ್ತಿರುವ ಶಾಲೆಗಳ ಕಾನೂನುಗಳು ಸದರಿ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳು ಸಮವಸ್ತ್ರ ಧರಿಸುವುದು ಕಡ್ಡಾಯವೆಂದು ಅಗತ್ಯಪಡಿಸಿದರೆ, ವಿದ್ಯಾರ್ಥಿಗಳ ಪೋಷಕರು ಅಥವಾ ವಿದ್ಯಾರ್ಥಿಗಳು ಸಮವಸ್ತ್ರಗಳನ್ನು ಖರೀದಿ ಮಾಡುವ ವೆಚ್ಚಗಳನ್ನು ಅಥವಾ ಖರ್ಚುಗಳನ್ನು ಭರಿಸಬೇಕಾಗುತ್ತದೆಯೆಂಬುದು ಸ್ಪಷ್ಟವಾಗಿರುತ್ತದೆ.ವಿದ್ಯಾರ್ಥಿಗಳ ಪೋಷಕರು ಸಮವಸ್ತ್ರಗಳನ್ನು ಖರೀದಿಸಲು ಸಮರ್ಥರಾಗಿರದಿದ್ದರೆ, ಇದು ಅವರ ಮಕ್ಕಳು ಪ್ರಾಥಮಿಕ ಶಿಕ್ಷಣವನ್ನು ಮುಂದುವರಿಸುವುದಕ್ಕೆ ಅಡ್ಡಿಯಾಗುತ್ತದೆ.ಆದ್ದರಿಂದ ಶಿಕ್ಷಣ ಹಕ್ಕು ಅಧಿನಿಯಮದ 3 ನೇ ಪ್ರಕರಣದ 2 ನೇ ಉಪ-ಪ್ರಕರಣದ ದೃಷ್ಟಿಯಿಂದ ವಿದ್ಯಾರ್ಥಿಗಳು ಅಥವಾ ಅವರ ಪೋಷಕರಿಗೆ ಸಮವಸ್ತ್ರಗಳಿಗೆ ವೆಚ್ಚ ಮಾಡಲು ಬಲವಂತಪಡಿಸಬಾರದು.3 ನೇ ಪ್ರಕರಣದ ( 2) ನೇ ಉಪ-ಪ್ರಕರಣದ ಹಿನ್ನೆಲೆಯಲ್ಲಿ, ರಾಜ್ಯ ಸರ್ಕಾರವು, ಪ್ರತಿಯೊಬ್ಬ ವಿದ್ಯಾರ್ಥಿಗೆ ಒಂದು ಜೊತೆ ಸಮವಸ್ತ್ರವನ್ನು ಒದಗಿಸುವ ನಿರ್ಣಯ ಕೈಗೊಂಡಿರುತ್ತದೆ.ಈ ಮೊದಲು ತಿಳಿಸಲಾದಂತೆ, ಕಳೆದ ಶೈಕ್ಷಣಿಕ ವರ್ಷದಲ್ಲಿ, ರಾಜ್ಯ ಸರ್ಕಾರವು, ಎರಡು ಜೊತೆ ಸಮವಸ್ತ್ರಗಳನ್ನು ಒದಗಿಸುವ ನಿರ್ಣಯ ಕೈಗೊಂಡಿತ್ತು.

13. ಹೀಗಾಗಿ, ರಾಜ್ಯವು, ಪ್ರತಿಯೊಬ್ಬ ವಿದ್ಯಾರ್ಥಿಗೆ ಒಂದು ಜೊತೆ ಸಮವಸ್ತ್ರವನ್ನು ಒದಗಿಸುವ, ಶಿಕ್ಷಣ ಹಕ್ಕು ಅಧಿನಿಯಮದ 3 ನೇ ಪ್ರಕರಣದ ಮೇರೆಗಿನ ತನ್ನ ಹೊಣೆಗಾರಿಕೆಯನ್ನು ಒಪ್ಪಿಕೊಂಡಿದೆ.ಒಂದು ಜೊತೆ ಸಮವಸ್ತ್ರ ಒದಗಿಸುವುದರಿಂದ ಹೇಗೆ ಉದ್ದೇಶವನ್ನು ಸಫಲಗೊಳಿಸಿದಂತಾಗುತ್ತದೆ ಎಂಬುದನ್ನು ಅರ್ಥ ಮಾಡಿಕೊಳ್ಳಲು ನಾವು ವಿಫಲರಾಗಿದ್ದೇವೆ.ರಾಜ್ಯವು, ಒಂದು ವಾರದಲ್ಲಿ, ಐದು ಅಥವಾ ಆರು ಅನುಕ್ರಮ ದಿನಗಳಿಗೆ ಪ್ರತೀ ದಿನವೂ ಒಂದೇ ಜೊತೆ ಸಮವಸ್ತ್ರವನ್ನು ಮಕ್ಕಳು ಧರಿಸುವುದನ್ನು ನಿರೀಕ್ಷಿಸಲು ಸಾಧ್ಯವಿಲ್ಲ.ಮನಸ್ಸಿಗೆ ಬಂದಂತೆ ಅಥವಾ ವಿವೇಚನಾರಹಿತವಾದ ನಿರ್ಧಾರವೆನ್ನುವುದನ್ನು ಹೊರತುಪಡಿಸಿದರೆ ಇದು ಸಂಪೂರ್ಣವಾಗಿ ಅನಾರೋಗ್ಯಕಾರಿಯಾಗಿರುತ್ತದೆ.ಅಷ್ಟೇ ಅಲ್ಲದೆ, ಎರಡನೇ ಜೊತೆ ಸಮವಸ್ತ್ರವನ್ನು ಒದಗಿಸಲು ರಾಜ್ಯವು ವಿಫಲವಾದ ಕಾರಣದಿಂದ, ಪೋಷಕರು ಅಥವಾ ವಿದ್ಯಾರ್ಥಿಗಳನ್ನು, ಎರಡನೇ ಸಮವಸ್ತ್ರಕ್ಕಾಗಿ ಸಂದಾಯ ಮಾಡುವುದು ಅನಿವಾರ್ಯವಾಗಬಹುದು.ಇದು ಭಾರತ ಸಂವಿಧಾನದ 21- ಎ ಅನುಚ್ಛೇದದ ಅಡಿಯಲ್ಲಿ ಖಾತರಿಪಡಿಸಲಾದ ಮೂಲಭೂತ ಹಕ್ಕಿನ ಉಲ್ಲಂಘನೆಯಾಗಿರುತ್ತದಲ್ಲದೆ, ಶಿಕ್ಷಣ ಹಕ್ಕು ಅಧಿನಿಯಮದ 3 ನೇ ಪ್ರಕರಣದ ( 2) ನೇ ಉಪ-ಪ್ರಕರಣದ ಹಾಗೂ ರಾಜ್ಯ ನಿಯಮಗಳ 5 ನೇ ನಿಯಮವನ್ನು ಸಹ ಉಲ್ಲಂಘಿಸಿದಂತಾಗುತ್ತದೆ.ವಿದ್ಯಾರ್ಥಿಗಳಿಗೆ ಕೇವಲ ಒಂದೇ ಒಂದು ಜೊತೆ ಸಮವಸ್ತ್ರ ಒದಗಿಸುವುದರ ಬದಲಾಗಿ ಒಂದಕ್ಕಿಂತ ಹೆಚ್ಚು ಜೊತೆ ಸಮವಸ್ತ್ರ ಪಡೆಯಲು ಹಕ್ಕುಳ್ಳವರಾಗಿರುತ್ತಾರೆ ಎಂಬ ಬಗ್ಗೆ ರಾಜ್ಯ ನಿಯಮಗಳ 5 ನೇ ನಿಯಮದಲ್ಲಿ ಸಾಕಷ್ಟು ಸೂಚನೆಗಳಿವೆ.ಸರ್ವ ಶಿಕ್ಷಣ ಅಭಿಯಾನ ಅಡಿಯಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಕ್ಕೆ ಸೇರಿದ ಹಾಗೂ ಬಡತನರೇಖೆಗಿಂತ ಕೆಳಗಿರುವ ಮಕ್ಕಳಿಗೆ ಎರಡು ಜೊತೆ ಸಮವಸ್ತ್ರವನ್ನು ನೀಡುವ ಅವಕಾಶವಿದೆಯೆಂಬುದನ್ನು ನಾವು ಈಗಾಗಲೇ ಸೂಚಿಸಿರುತ್ತೇವೆ.

14. ಈ ಹಿಂದಿನ ಶೈಕ್ಷಣಿಕ ವರ್ಷದಲ್ಲಿ ಎರಡು ಜೊತೆ ಸಮವಸ್ತ್ರಗಳನ್ನು ಒದಗಿಸುವ ತನ್ನ ಹೊಣೆಗಾರಿಕೆಯನ್ನು ಒಪ್ಪಿಕೊಂಡ ನಂತರ, ಪ್ರಸಕ್ತ ಶೈಕ್ಷಣಿಕ ವರ್ಷದ ಅವಧಿಯಲ್ಲಿ, ರಾಜ್ಯ ಸರ್ಕಾರವು ಒಂದೇ ಒಂದು ಜೊತೆ ಸಮವಸ್ತ್ರವನ್ನು ಒದಗಿಸಲು ಏಕೆ ನಿರ್ಧರಿಸಿದೆ ಎಂಬುದನ್ನು ಅರ್ಥಮಾಡಿಕೊಳ್ಳುವಲ್ಲಿ ನಾವು ಸೋತಿದ್ದೇವೆ.

15. ಇಂದು, ರಾಜ್ಯವು ಆಕ್ಷೇಪಣೆಗಳ ಹೇಳಿಕೆಯನ್ನು ಸಲ್ಲಿಸಿದೆ.ಹಲವಾರು ಪ್ರಕ್ರಿಯಾತ್ಮಕ ವಿಷಯಗಳ ಹಾಗೂ ತೊಂದರೆಗಳನ್ನು ವಿವರಿಸಿದ ನಂತರ, 10 ನೇ ಕಂಡಿಕೆಯಲ್ಲಿ ತುಂಬಾ ವಿಲಕ್ಷಣ ಹೇಳಿಕೆಯನ್ನು ನೀಡಿದ್ದು, ಅದನ್ನು ಹೀಗೆ ಓದಲಾಗಿದೆ:

10. 2019-20ನೇ ಸಾಲಿನಲ್ಲಿ ಹಂಚಿಕೆಯಾದ ನಿಧಿಗಳ ಉದ್ದೇಶಿತ ಬಳಕೆಯಲ್ಲಿ ಎರಡನೇ ಜೊತೆ ಸಿದ್ಧ ಸಮವಸ್ತ್ರಗಳಿಗೆ ಮೀಸಲಿರಿಸಲಾದ ಮೊತ್ತವೂ ಸೇರಿರುತ್ತದೆ.ಸಮಗ್ರ ಶಿಕ್ಷಣಕ್ಕೆ ಉದ್ದೇಶಿತ ನಿಧಿಗಳು ಬಿಡುಗಡೆಯಾದ ಕೂಡಲೇ ಸಿದ್ಧ ಸಮವಸ್ತ್ರವನ್ನು ಖರೀದಿಸುವ ಹಾಗೂ ವಿತರಿಸುವ ಕಾರ್ಯವನ್ನು ಕೈಗೆತ್ತಿಕೊಳ್ಳಲು ಆಯಾಯ ಶಾಲೆಗಳಿಗೆ ಶಾಲಾವಾರು ಮೊತ್ತವನ್ನು ಕಳುಹಿಸಲಾಗುವುದು.

(ಒತ್ತು ನೀಡಲಾಗಿದೆ)

ಹೀಗಾಗಿ, ಎರಡನೇ ಜೊತೆ ಸಮವಸ್ತ್ರವನ್ನು ಒದಗಿಸುವ ಸಲುವಾಗಿ ಹಣಕಾಸನ್ನು ಮೀಸಲಿರಿಸಲಾಗಿದೆ.ಆದಾಗ್ಯೂ, ಸಮಗ್ರ ಶಿಕ್ಷಣಕ್ಕೆ ಹಣಕಾಸು ಬಿಡುಗಡೆಯಾದ ಕೂಡಲೇ, ಸಿದ್ಧ ಸಮವಸ್ತ್ರಗಳ ಖರೀದಿ ಹಾಗೂ ವಿತರಣೆ ಮಾಡುವ ಕಾರ್ಯ ಕೈಗೆತ್ತಿಕೊಳ್ಳಲು ಆಯಾಯ ಶಾಲೆಗಳಿಗೆ ಮೊತ್ತವನ್ನು ಕಳುಹಿಸಲಾಗುವುದು ಎಂಬ ಅಸ್ಪಷ್ಟ ನಿಲುವನ್ನು ತೆಗೆದುಕೊಳ್ಳಲಾಗಿದೆ.ಯಾವಾಗ ಹಣಕಾಸನ್ನು ಬಿಡುಗಡೆ ಮಾಡಲಾಗುವುದು ಮತ್ತು ಯಾರ ಮೂಲಕ ಹಣಕಾಸನ್ನು ಬಿಡುಗಡೆ ಮಾಡಲಾಗುತ್ತದೆಯೆಂಬುದನ್ನು ತಿಳಿಸಿರುವುದಿಲ್ಲ.2019-20ನೇ ಸಾಲಿನ ನಿಧಿಗಳ ಉದ್ದೇಶಿತ ಬಳಕೆಯಲ್ಲಿ ಎರಡನೇ ಜೊತೆ ಸಮವಸ್ತ್ರಕ್ಕೆ ಮೀಸಲಿರಿಸಲಾದ ಮೊತ್ತವು ಸೇರಿರುತ್ತದೆ ಎಂಬುದನ್ನು ಒಪ್ಪಿಕೊಂಡ ನಂತರವೂ ಸಹ ಹೀಗೆ ಹೇಳಿಕೆ ನೀಡಲಾಗಿದೆ.

16. ವಾಸ್ತವವಾಗಿ, ಪ್ರಸ್ತುತ ಶೈಕ್ಷಣಿಕ ವರ್ಷದ ಮೂರು ತಿಂಗಳುಗಳು ಈಗಾಗಲೇ ಕಳೆದುಹೋಗಿವೆ.ರಾಜ್ಯ ಸರ್ಕಾರವು ಸಲ್ಲಿಸಿದ ಆಕ್ಷೇಪಣೆಗಳ ಹೇಳಿಕೆಯಲ್ಲಿ ಹಣಕಾಸು ಬಿಡುಗಡೆಯಾದ ಕೂಡಲೇ ಅದನ್ನು ವಿವಿಧ ಶಾಲೆಗಳಿಗೆ ವಿತರಿಸಲಾಗುವುದು ಎಂಬುದಾಗಿ ದಾಖಲಿಸಲಾಗಿದೆ. ಸಾಂವಿಧಾನಿಕ ಹಾಗೂ ರಾಜ್ಯ ಸರ್ಕಾರದ ಶಾಸನಬದ್ಧ ಹೊಣೆಗಾರಿಕೆಯ ಹಿನ್ನೆಲೆಯಲ್ಲಿ ಅಂಥ ಭರವಸೆಗೆ ಮೌಲ್ಯವಿರುವುದಿಲ್ಲ.

17. ಶಿಕ್ಷಣ ಹಕ್ಕು ಅಧಿನಿಯಮದ 7 ನೇ ಪ್ರಕರಣದ ಅಡಿಯಲ್ಲಿ ಶಿಕ್ಷಣ ಹಕ್ಕು ಅಧಿನಿಯಮದ ಉದ್ದೇಶಗಳಿಗಾಗಿ ಹಣಕಾಸನ್ನು ಒದಗಿಸುವುದು/ಬಿಡುಗಡೆ ಮಾಡುವುದು ಕೇಂದ್ರ ಸರ್ಕಾರ ಹಾಗೂ ರಾಜ್ಯ ಸರ್ಕಾರಗಳೆರಡರ ಸಹವರ್ತಿ ಹೊಣೆಗಾರಿಕೆಯಾಗಿದೆ.ಆದುದರಿಂದ, ಕೇಂದ್ರ ಸರ್ಕಾರದ ಅನುದಾನವನ್ನು ರಾಜ್ಯ ಸರ್ಕಾರವು ಬಯಸಿದರೆ, ಇದು ಅಂಥ ವಂತಿಗೆಯನ್ನು ಯಾವಾಗಲೂ ಕೋರಬಹುದು.ಅಧಿನಿಯಮದ 7 ನೇ ಪ್ರಕರಣದ ಆಜ್ಞಾಪನೆಯನ್ನು ದೃಷ್ಟಿಯಲ್ಲಿಟ್ಟುಕೊಂಡು ಕೇಂದ್ರ ಸರ್ಕಾರವು, ರಾಜ್ಯ ಸರ್ಕಾರದ ಕೋರಿಕೆಯ ಮೇಲೆ ಕಾರ್ಯ ನಿರ್ವಹಿಸಲು ಬದ್ಧವಾಗಿರಬೇಕು.

18. 2018-2019ನೇ ವರ್ಷದ ರಾಜ್ಯ ಸರ್ಕಾರದ ಆದೇಶದ ಅವಗಾಹನೆಯಿಂದ, 2018-19ನೇ ಸಾಲಿನ ಶೈಕ್ಷಣಿಕ ವರ್ಷದ ಅವಧಿಗೆ ಶೂಗಳನ್ನು ಹಾಗೂ ಕಾಲುಚೀಲಗಳನ್ನು ಖರೀದಿಸಲು ಪ್ರಸ್ತಾಪಿಸಿರುವುದು ತಿಳಿದುಬರುತ್ತದೆ.ಶೂಗಳು, ಗೊತ್ತುಪಡಿಸಲಾದ ಶಾಲಾ ಸಮವಸ್ತ್ರದ ಭಾಗವಾಗಿದ್ದರೆ, ಶಿಕ್ಷಣ ಹಕ್ಕು ಅಧಿನಿಯಮದ 3 ನೇ ಪ್ರಕರಣದ ( 2) ನೇ ಉಪ-ಪ್ರಕರಣವನ್ನು ಗಮನದಲ್ಲಿಟ್ಟುಕೊಂಡು, ರಾಜ್ಯ ಸರ್ಕಾರದ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ರಾಜ್ಯ ಸರ್ಕಾರವು ಕನಿಷ್ಠ ಪಕ್ಷ ಒಂದು ಜೊತೆ ಶೂ ಹಾಗೂ ಎರಡು ಜೊತೆ ಕಾಲುಚೀಲಗಳನ್ನು ಉಚಿತವಾಗಿ ಒದಗಿಸಬೇಕಾಗುತ್ತದೆ.

19. ಆದುದರಿಂದ, ಅರ್ಜಿಯನ್ನು ಪುರಸ್ಕರಿಸಬೇಕು.ರಾಜ್ಯ ಸರ್ಕಾರವು ನಡೆಸುತ್ತಿರುವ ಶಾಲೆಗಳಲ್ಲಿ ಪ್ರಾಥಮಿಕ ಶಿಕ್ಷಣವನ್ನು ಪಡೆಯುತ್ತಿರುವ ಶಿಕ್ಷಣ ಹಕ್ಕು ಅಧಿನಿಯಮದ 3 ನೇ ಪ್ರಕರಣಕ್ಕೆ ಒಳಪಡುವ ಮಕ್ಕಳಿಗೆ ಎರಡನೇ ಜೊತೆ ಸಮವಸ್ತ್ರಗಳನ್ನು ಒದಗಿಸುವುದನ್ನು ಖಚಿತಪಡಿಸಲು ರಾಜ್ಯ ಸರ್ಕಾರಕ್ಕೆ ಎರಡು ತಿಂಗಳುಗಳ ಸಮಯವನ್ನು ನೀಡಲು ನಾವು ಉದ್ದೇಶಿಸಿದ್ದೇವೆ.

20. ಅರ್ಜಿದಾರನು (ತನ್ನ ತಂದೆಯ ಮೂಲಕ) ತುಂಬಾ ಪ್ರಮುಖ ಅಂಶವನ್ನು ಎತ್ತಿದ್ದು, ಅದು ಶಿಕ್ಷಣ ಹಕ್ಕು ಅಧಿನಿಯಮದ 3 ನೇ ಪ್ರಕರಣಕ್ಕೆ ಒಳಪಡುವ ಸಾವಿರಾರು ವಿದ್ಯಾರ್ಥಿಗಳಿಗೆ ಸಹಾಯಕವಾಗುವ ನಿರ್ಣಯವಾಗಿದೆ ಎಂಬುದನ್ನು ನಾವಿಲ್ಲಿ ದಾಖಲಿಸಬೇಕು.ಅರ್ಜಿದಾರರ ಪರವಾಗಿ ಹಾಜರಾಗಿರುವ ಮಾನ್ಯ ವಕೀಲರು, ಜನಹಿತ ಕಾರ್ಯವನ್ನು ಮಾಡಿರುವುದರಿಂದ ನಾವು ಹಣದ ರೂಪದಲ್ಲಿ ವೆಚ್ಚವನ್ನು ನೀಡಲಾಗುವುದಿಲ್ಲ.ಆದಾಗ್ಯೂ, ಅರ್ಜಿದಾರನಿಗೆ ಎರಡನೇ ಜೊತೆ ಸಮವಸ್ತ್ರವನ್ನು ಕೂಡಲೇ ಒದಗಿಸುವಂತೆ ರಾಜ್ಯ ಸರ್ಕಾರಕ್ಕೆ ನಿರ್ದೇಶಿಸಲು ನಾವು ಪ್ರಸ್ತಾಪಿಸಿದ್ದೇವೆ.ಅರ್ಜಿದಾರನು ಯಾವ ಶಾಲೆಯಲ್ಲಿ ವ್ಯಾಸಂಗ ಮಾಡುತ್ತಿರುವನೋ ಆ ಶಾಲೆಯು, ವಿದ್ಯಾರ್ಥಿಗಳು ಹೂಗಳನ್ನು ಹಾಕಲು ಅಗತ್ಯಪಡಿಸಿದರೆ, ಒಂದು ಜೊತೆ ಹೂಗಳನ್ನು ಎರಡು ಜೊತೆ ಕಾಲುಚೀಲಗಳನ್ನು ಅರ್ಜಿದಾರನಿಗೆ ಕೂಡಲೇ ನೀಡತಕ್ಕದ್ದು.ಮಾನ್ಯ ಸರ್ಕಾರಿ ವಕೀಲರ ಕಚೇರಿಗೆ ಈ ಆದೇಶದ ಪ್ರತಿಯನ್ನು ನೀಡಲಾಗುವ ದಿನಾಂಕದಿಂದ ಎರಡು ವಾರಗಳ ಅವಧಿಯೊಳಗೆ ಇದನ್ನು ಈಡೇರಿಸತಕ್ಕದ್ದು.ಹೂಗಳು ನಿಯಮಿಸಲಾದ ಶಾಲಾ ಸಮವಸ್ತ್ರದ ಭಾಗವಾಗಿದ್ದರೆ, ಶಿಕ್ಷಣ ಹಕ್ಕು ಅಧಿನಿಯಮ 3 ನೇ ಪ್ರಕರಣದ 2 ನೇ ಉಪ-ಪ್ರಕರಣವನ್ನು ದೃಷ್ಟಿಯಲ್ಲಿಟ್ಟುಕೊಂಡು, ಕನಿಷ್ಠ ಪಕ್ಷ ಒಂದು ಜೊತೆ ಹೂಗಳನ್ನು ಹಾಗೂ ಎರಡು ಜೊತೆ ಕಾಲುಚೀಲಗಳನ್ನು, ಅರ್ಜಿದಾರರಿಗೆ ಕೂಡಲೇ ಒದಗಿಸತಕ್ಕದ್ದು.ಈ ಅನುಸರಣೆಯನ್ನು, ಮಾನ್ಯ ಸರ್ಕಾರಿ ವಕೀಲರ ಕಚೇರಿಗೆ ಈ ಆದೇಶವನ್ನು ನೀಡಿದ ದಿನಾಂಕದಿಂದ ಎರಡು ವಾರಗಳ ಅವಧಿಯೊಳಗೆ ಮಾಡತಕ್ಕದ್ದು.

21. ತದನುಸಾರವಾಗಿ ನಾವು ಈ ಮುಂದಿನ ಆದೇಶವನ್ನು ಹೊರಡಿಸಿರುತ್ತೇವೆ.

ಆದೇಶ

( 6) ಶಿಕ್ಷಣ ಹಕ್ಕು ಅಧಿನಿಯಮದ 3 ನೇ ಪ್ರಕರಣದ ಮೂಲಕ ನಡೆಸಲ್ಪಡುತ್ತಿರುವ ರಾಜ್ಯ ಸರ್ಕಾರಿ ಶಾಲೆಗಳಲ್ಲಿ ಪ್ರಾಥಮಿಕ ಶಿಕ್ಷಣವನ್ನು ಮುಂದುವರಿಸುತ್ತಿರುವ ವಿದ್ಯಾರ್ಥಿಗಳಿಗೆ ಎರಡು ಜೊತೆ ಸಮವಸ್ತ್ರಗಳನ್ನು ಒದಗಿಸುವುದು ಮೊದಲ ಹಾಗೂ ಎರಡನೇ ಎದುರುದಾರರ ಹೊಣೆಗಾರಿಕೆಯಾಗಿರುತ್ತದೆಯೆಂದು ನಾವು ಅಭಿಪ್ರಾಯಪಟ್ಟಿರುತ್ತೇವೆ:

(ii) ಸಂಬಂಧಪಟ್ಟ ಶಾಲೆಗಳ ನಿಯಮಗಳು ವಿದ್ಯಾರ್ಥಿಗಳು ಹೂಗಳನ್ನು ಧರಿಸುವಂತೆ ಅಗತ್ಯಪಡಿಸಿದಾಗಲೆಲ್ಲಾ ಮೊದಲ ಹಾಗೂ ಎರಡನೇ ಎದುರುದಾರರು ವಿದ್ಯಾರ್ಥಿಗಳಿಗೆ ಒಂದು ಜೊತೆ ಹೂಗಳನ್ನು ಎರಡು ಜೋತೆ ಕಾಲುಚೀಲಗಳನ್ನು ಒದಗಿಸುವ ಹೊಣೆಗಾರಿಕೆಯನ್ನು ಹೊಂದಿರತಕ್ಕದ್ದು;

(iii) ಶಿಕ್ಷಣ ಹಕ್ಕು ಅಧಿನಿಯಮದ 3 ನೇ ಪ್ರಕರಣವು ಅನ್ವಯವಾಗುವ ರಾಜ್ಯ ಸರ್ಕಾರವು ನಡೆಸುತ್ತಿರುವ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ, ಮಾನ್ಯ ಸರ್ಕಾರಿ ವಕೀಲರ ಕಚೇರಿಗೆ ಈ ಆದೇಶದ ಪ್ರತಿಯನ್ನು ಒದಗಿಸಿದ ದಿನಾಂಕದಿಂದ ಎರಡು ತಿ ೦ ಗಳುಗಳೊಳಗೆ ಷಗಳು ಹಾಗೂ ಕಾಲುಚೀಲಗಳೊಂದಿಗೆ (ಅಗತ್ಯವಿರುವ ಕಡೆಗಳಲ್ಲೆಲ್ಲಾ ಮೇಲೆ ಅಭಿಪ್ರಾಯಪಡಲಾದಂತೆ, ಎರಡನೇ ಜೊತೆ ಸಮವಸ್ತ್ರಗಳನ್ನು ಒದಗಿಸುವಂತೆ ರಾಜ್ಯ ಸರ್ಕಾರಕ್ಕೆ ನಿರ್ದೇಶನವನ್ನು ನೀಡುತ್ತೇವೆ.

(iv) ಶಿಕ್ಷಣ ಹಕ್ಕು ಅಧಿನಿಯಮದ 7 ನೇ ಪ್ರಕರಣದ ಮೇರೆಗೆ ವಿಧಿಸಲಾದ ಉಪಬಂಧಗಳಿಗೆ ಅನುಸಾರವಾಗಿ ಕೇಂದ್ರ ಸರ್ಕಾರದಿಂದ ಆರ್ಥಿಕ ನೆರವನ್ನು ಅಥವಾ ವಂತಿಗೆಯನ್ನು ಕೋರಲು ರಾಜ್ಯ ಸರ್ಕಾರಕ್ಕೆ ಯಾವಾಗಲೂ ಅವಕಾಶವಿರುತ್ತದೆ.

( v) ಪ್ರಸ್ತುತ ಶೈಕ್ಷಣಿಕ ವರ್ಷದ ಅವಧಿಯಲ್ಲಿ ಹಾಗೂ ಅದರ ನಂತರವೂ ಕೂಡ ಸಂಬಂಧಪಟ್ಟ ಮಕ್ಕಳಿಗೆ ಎರಡು ಜೊತೆ ಸಮವಸ್ತ್ರಗಳನ್ನು ಒದಗಿಸುವುದು ಎರಡೂ ಸರ್ಕಾರಗಳ ಹೊಣೆಗಾರಿಕೆಯಾಗಿರುತ್ತದೆಯೆಂಬುದನ್ನು ಸೇರಿಸುವ ಅಗತ್ಯವಿರುವುದಿಲ್ಲ.

(vi) ಮೇಲೆ ತಿಳಿಸಿರುವುದರಷ್ಟರಮಟ್ಟಿಗೆ, ಸರ್ಕಾರಿ ಅಧಿಸೂಚನೆ ದಿನಾ ೦ ಕ:18 ನೇ ಜನವರಿ 2019 ನ್ನು ಮಾರ್ಪಾಡು ಮಾಡಲಾಗಿದೆಯೆಂದು ಭಾವಿಸುವುದು.

(vii) ವೆಚ್ಚಗಳಿಗೆ ಬದಲಾಗಿ, ಮಾನ್ಯ ಸರ್ಕಾರಿ ವಕೀಲರ ಕಚೇರಿಗೆ ಈ ಆದೇಶದ ಪ್ರತಿಯನ್ನು ಒದಗಿಸಿದ ದಿನಾಂಕದಿಂದ ಎರಡು ವಾರಗಳೊಳಗೆ ಅರ್ಜಿದಾರನಿಗೆ, ಒಂದು ಜೊತೆ ಹೂ ಹಾಗೂ ಎರಡು ಜೊತೆ

ಕಾಲುಚೀಲಗಳೊಂದಿಗೆ (ಒದಗಿಸಲಾದ ಹೂಗಳು ಶಾಲಾ ಸಮವಸ್ತ್ರದ ಭಾಗವಾಗಿರುತ್ತವೆ) ಎರಡನೇ ಜೊತೆ ಸಿದ್ಧ ಸಮವಸ್ತ್ರವನ್ನು, ಒದಗಿಸುವಂತೆ ಖಾತರಿಪಡಿಸಿಕೊಳ್ಳುವಂತೆ ರಾಜ್ಯ ಸರ್ಕಾರಕ್ಕೆ ನಿರ್ದೇಶನ ನೀಡಿರುತ್ತೇವೆ.

(viii) ಈ ರಿಟ್ ಅರ್ಜಿಯನ್ನು ಮೇಲಿನ ನಿಬಂಧನೆಗಳ ಮೇಲೆ ಪುರಸ್ಕರಿಸಲಾಗಿದೆ.

(ix) ತೀರ್ಪಿನ ಒಂದು ಪ್ರತಿಯನ್ನು ಮಾನ್ಯ ಸರ್ಕಾರಿ ವಕೀಲರ ಕಚೇರಿಗೆ ಒದಗಿಸುವುದು.